ಅಧ್ಯಕ್ಷರು: ಮಾನ್ಯ ಅರಣ್ಯ ಮಂತ್ರಿಗಳು ಸದನದಲ್ಲಿ ಇಲ್ಲ. ಮಂತ್ರಿಗಳು ಇಲ್ಲದಿದ್ದಾಗ ಪ್ರಸ್ತಾಪಿಸಿದರೆ ನಾನು ಏನು ಮಾಡಿಲಿ? I cannot help it.

3) ಗಮನ ಸೆಳೆಯುವ ಸೂಚನೆ

ವಿಷಯ (ಅ) ಪುತ್ತೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಪ್ರದೇಶದಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಗ್ರಾಮೀಣ ಅಭ್ಯರ್ಥಿ ಎಂಬ ಪ್ರಮಾಣ ಪತ್ರವನ್ನು ನೀಡದಿರುವುದರಿಂದ ಸಿ.ಇ.ಟಿ. ಸ್ಥಾನ ಹಂಚಿಕೆಯಲ್ಲಿ ಅನ್ಯಾಯವಾಗಿರುವ ಬಗ್ಗೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ ಪುತ್ತೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವಂತಹ ಗ್ರಾಮಾಂತರ ಪ್ರದೇಶದಲ್ಲಿರುವ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ಓದಿರುವ ವಿದ್ಯಾರ್ಥಿಗಳಿಗೆ ಕಂದಾಯ ಹಾಗೂ ಶಿಕ್ಷಣ ಇಲಾಖೆಯಿಂದ ಗ್ರಾಮೀಣ ಅಭ್ಯರ್ಥಿ ಎಂಬ ಪ್ರಮಾಣ ಪತ್ರವನ್ನು ನೀಡದಿರುವುದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ಸಿಇಟಿ ಸ್ಥಾನ ಹಂಚಿಕೆಯಲ್ಲಿ ಅನ್ಯಾಯವಾಗಿರುವ ಬಗ್ಗೆ ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಪುತ್ತೂರು ಪಟ್ಟಣದ ಜನಸಂಖ್ಯೆಯು 48 ಸಾವಿರವಿದ್ದು, ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಉಪ ನಿಯಮ 3ರ ವ್ಯಾಪ್ತಿಯಲ್ಲಿ ಇದು ಸಣ್ಣ ನಗರ ಪ್ರದೇಶವಾಗಿದೆ. ಆದ್ದರಿಂದ ಪುರಸಭಾ ವ್ಯಾಪ್ತಿಯ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ದೃಢೀಕರಿಸುತ್ತಿಲ್ಲ. ಈ ಪ್ರದೇಶದ ವ್ಯಾಪ್ತಿಯ ಶಾಲೆಗಳನ್ನು ಹೊರತುಪಡಿಸಿ ತಾಲ್ಲೂಕಿನ ಉಳಿದ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೆ ಗ್ರಾಮೀಣ ಅಭ್ಯರ್ಥಿ ಪ್ರಮಾಣಪತ್ರವನ್ನು ಇಲಾಖೆಯ ಅಧಿಕಾರಿಗಳು ಮೇಲು ಸಹಿ ಮಾಡುತ್ತಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ತಿದ್ದುಪಡಿಯನ್ನು ಓದಿದ್ದೇನೆ. ಹಿಂದೆ ಏನು ಮಾಡಿದ್ದಾರೆಂದರೆ. ವೃತ್ತಿಪರ ಕೋರ್ಸ್‌ಗಳಿಗೆ 50 ಸಾವಿರ ಜನಸಂಖ್ಯೆಯುಳ್ಳ ಪ್ರದೇಶಗಳಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳನ್ನು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳೆಂದು ಪರಿಗಣನೆ ಮಾಡಲಾಗಿದೆ. ಈಗ ತಾವೊಂದು ಅಮೆಂಡ್‌ಮೆಂಟ್ ತಂದಿದ್ದೀರಿ. ಕರ್ನಾಟಕ ಮುನಿಸಿಪಾಲಿಟಿ ಆಕ್ಟ್ 64ರ ಪ್ರಕಾರ ವಿಶಾಲವಾದ ನಗರ ಪ್ರದೇಶ ಲಾರ್ಜರ್ ಅರ್ಬನ್ ಏರಿಯಾ, ಚಿಕ್ಕ ನಗರ ಪ್ರದೇಶ ಸ್ಮಾಲರ್ ಅರ್ಬನ್ ಏರಿಯಾ ಮತ್ತು ಪರಿವರ್ತನೆಯ ಹಂತದಲ್ಲಿರುವ ಪ್ರದೇಶ, ಟ್ರಾನ್ಸಿಷನಲ್ ಏರಿಯಾ ಇವುಗಳನ್ನು ಹೊರತುಪಡಿಸಿ ಎಂದು ತಾವು ಅದನ್ನು ಮಾಡಿದ್ದೀರಿ. ಸಾಧಾರಣವಾಗಿ ಈ ತಿದ್ದುಪಡಿಗಳನ್ನು ಯಾವಾಗ ತರುತ್ತಾರೆ? ಯಾವುದಾದರೂ ಕೊರತೆ ಇದ್ದಾಗ ಅಥವಾ ಯಾವುದಾದರೂ ಒಂದು ರೀತಿಯ ವ್ಯತ್ಯಾಸಗಳು ಇದ್ದಾಗ ಅಥವಾ ತಪ್ಪೆಂದು ಕಂಡು ಬಂದಾಗ ತಿದ್ದುಪಡಿ ಮಾಡುವಂತಹದ್ದು ಸ್ವಾಭಾವಿಕ.

ಆದರೆ ಈ ತಿದ್ದುಪಡಿಯಿಂದ ಸರ್ಕಾರಕ್ಕೆ ಏನು ಲಾಭವಾಗಿದೆ ಸ್ವಾಮಿ? ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಏನು ಲಾಭವಾಗಿದೆ? ನನ್ನ ಪ್ರಕಾರ ಸಾವಿರಾರು ವಿದ್ಯಾರ್ಥಿಗಳಿಗೆ ಏನಾಗಿದೆ? ಉದಾಹರಣೆಗೆ ಸುಳ್ಯಾ ಪಂಚಾಯಿತಿ ಇರಬಹುದು, ಬೆಳ್ತಂಗಡಿ ಈಗ ಪರಿವರ್ತಿತ ಪಟ್ಟಣ ಪಂಚಾಯಿತಿ; ಈ ಪ್ರದೇಶಗಳನ್ನು ಸಾಧಾರಣವಾಗಿ ನಗರವೆಂದು ಹೇಳುವಂತಹದ್ದು ಅಲ್ಲ. ಸ್ವಲ್ಪ ಜನಸಂಖ್ಯೆಯಿರುವ ಜಾಗ. ಈ ಭಾಗದಲ್ಲಿ ಇವತ್ತು ಯಾವುದೇ ಬೇರೆ ಶಾಲೆಗಳು ಇರುವುದಿಲ್ಲ. ಅವರು ಗ್ರಾಮಾಂತರ ಮಟ್ಟದಿಂದ ಇಲ್ಲಿ ಬಂದು ಕಲಿಯುವಂತಹ ಎಲ್ಲಾ ಕೆಲಸಕಾರ್ಯ ಮಾಡುತ್ತಿದ್ದಾರೆ. 50 ಸಾವಿರ ಜನಸಂಖ್ಯೆ ಇರುವಲ್ಲಿ ಅವರಿಗೆ ಯೋಗ್ಯ ರೀತಿಯಲ್ಲಿ ಸರ್ಟಿಫಿಕೇಟ್ ಸಿಕ್ಕಿದರೆ ಅವರಿಗೆ ಯೋಗ್ಯ ಅವಕಾಶ ಆಗುತ್ತಿತ್ತು. ಇದು ತಮಗೆ ಗೊತ್ತಿದೆ. ಗ್ರಾಮೀಣ ಕೃಪಾಂಕದಿಂದ ಗ್ರಾಮೀಣ ಪ್ರದೇಶದಲ್ಲಿ ಕಲಿತಂತ ವ್ಯಕ್ತಿಗಳಿಗೆ ಇವತ್ತು ಎಷ್ಟು ತೊಂದರೆಗಳಾಗಿದೆ ಎನ್ನುವುದು ತಮಗೆ ಗೊತ್ತಿದೆ. ನಾನು ಕೇಳುವುದೇನೆಂದರೆ, ಈ ತಿದ್ದುಪಡಿಯನ್ನು ಏಕೆ ರದ್ದುಪಡಿಸಬಾರದು? ತಾವು ಇದರ ಬಗ್ಗೆ ಪರಿಶೀಲನೆ ಮಾಡಿ. ನಾನು ಹೇಳುವುದಿಲ್ಲ, ತಾವು ಕೂಡ ಆಗಾಗ ಸುಳ್ಯಾ, ಪುತ್ತೂರು ಬೆಳ್ತಂಗಡಿ ಕಡೆಗೆ ಬರುತ್ತಿದ್ದೀರಿ. ತಮಗೆ ಗೊತ್ತಿದೆ ಗ್ರಾಮೀಣ ಪ್ರದೇಶಗಳಲ್ಲಿ ಹೈಸ್ಕೂಲ್‌ಗಳು ಇಲ್ಲ. ಸುಮಾರು 10-15 ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಗ್ರಾಮಗಳಿಂದ ಈ ಪ್ರದೇಶಗಳಿಗೆ ಬರುವುದು ಇದೆ. 50 ಸಾವಿರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಹಿಂದಿನ ಆದೇಶವನ್ನು ಊರ್ಜಿತವಾಗಿಟ್ಟರೆ ಸಾವಿರಾರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇವತ್ತು ಹೈಯರ್ ಎಜ್ಯುಕೇಶನ್ ಸಿಗುತ್ತದೆ; ತಮ್ಮ ಸರ್ಕಾರ ಇವತ್ತು ಎಲ್ಲರಿಗೂ ಕೂಡ ಟೆಕ್ನಿಕಲ್ ಎಜುಕೇಶನ್ ಕೊಡಬೇಕು ಮೆಡಿಕಲ್ ಎಜುಕೇಶನ್ ಕೊಡಬೇಕು ಎಂದು ಹೆಚ್ಚು ಹೆಚ್ಚು ವ್ಯವಸ್ಥೆಗಳನ್ನು ಮಾಡುತ್ತಿರುವ ಸಂದರ್ಭದಲ್ಲಿ ಎಲ್ಲಾ ವ್ಯವಸ್ಥೆಗಳೊಂದಿಗೆ ಜೋಡಿಸಿಕೊಳ್ಳುವುದಕ್ಕೆ ಪ್ರಾಯಶ: ಹಿಂದಿನ ಆದೇಶವನ್ನು ಇಟ್ಟುಕೊಂಡು ಈಗಿನ ತಿದ್ದುಪಡಿಯನ್ನು ರದ್ದು ಮಾಡಿದರೆ ಅತ್ಯಂತ ಸೂಕ್ತವಾಗಬಹುದೆಂದು ನನ್ನ ಅಭಿಪ್ರಾಯ. ಪ್ರಾಯಶ: ಹಿಂದಿನ ತಿದ್ದುಪಡಿಯಲ್ಲಿ ಯಾವುದೇ ತಪ್ಪುಗಳು ಇಲ್ಲ ಯಾವುದೇ ಕೊರತೆಯಿಲ್ಲ, ಯಾವುದೇ ವ್ಯತ್ಯಾಸಗಳು ಇಲ್ಲ. ಇದರ ಬದಲಾವಣೆಯಾದ ಕಾರಣದಿಂದ ಮಾತ್ರ ಇವತ್ತು ಕೊರತೆಯಾಗಿದೆ, ವ್ಯತ್ಯಾಸವಾಗಿದೆ, ತಪ್ಪಾಗಿದೆ. ಆದಕಾರಣದ ನನ್ನ ವಿನಂತಿ ಏನೆಂದರೆ ದಯವಿಟ್ಟು ಹಿಂದಿನ ಆದೇಶದಂತೆ 50 ಸಾವಿರ ಜನಸಂಖ್ಯೆಯೆಂದು ಅವೊಂದು ವ್ಯವಸ್ಥೆಯನ್ನು ಇಟ್ಟರೆ ಎಲ್ಲಾ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸಹಾಯಕವಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕು. ಸರ್ಕಾರ ಈವೊಂದು ನಿಟ್ಟಿನಲ್ಲಿ ಒಂದು ಹೆಜ್ಜೆಯಿಟ್ಟು ಹೊಸ ತಿದ್ದುಪಡಿಯನ್ನು ಏನು ತಂದಿದ್ದೀರಿ ಅದನ್ನು ತಾವು ರದ್ದುಪಡಿಸುವಂತೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಗ್ರಾಮೀಣ ಪ್ರದೇಶದ ಎಲ್ಲ ವಿದ್ಯಾರ್ಥಿಗಳ ಮತ್ತು ಹೆತ್ತವರ ಪರವಾಗಿ ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಪ್ರೊ: ಬಿ.ಕೆ. ಚಂದ್ರಶೇಖರ್: ಮಾನ್ಯ ಅಧ್ಯಕ್ಷರೆ, ಖಂಡಿತಾ ಪರಿಶೀಲನೆ ಮಾಡುತ್ತೇನೆ. ಈ ವಿಷಯ ಒಂದು ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು, ಇನ್ನೊಂದು ಗೊತ್ತಿದೆ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ್ದು ಇದೆ. ಅವೊಂದು ನೋಟಿಫಿಕೇಶನ್‌ನಲ್ಲಿ ಪುತ್ತೂರು ಪುರಸಭೆಯನ್ನು ಆ ಒಂದು ವರ್ಗೀಕರಣದಲ್ಲಿ ಸೇರಿಸಿರುವುದು ನಗರಾಭಿವೃದ್ಧಿ ಇಲಾಖೆಯಿಂದ ಬಂದಿದೆ. ಆ ನೋಟೀಫಿಕೇಶನ್ ಆಧಾರದ ಮೇಲೆ ನಾವು ಅದನ್ನು ಕೊಡಬೇಕಾಗುತ್ತದೆ. ಜೊತೆಗೆ, ತಾವು

ಹೇಳಿದ ವಿಚಾರವನ್ನು ಚರ್ಚೆಮಾಡಿ ಅದರಿಂದ ಹೆಚ್ಚು ಅನುಕೂಲವಾಗುತ್ತದೆಂದರೆ ಹೇಗೆ ಮಾಡಬೇಕೆಂದು ಅವರ ಜೊತೆಯಲ್ಲಿ ಮಾತನಾಡುವುದಕ್ಕೆ ಖಂಡಿತಾ ತಯಾರಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಪುತ್ತೂರು ಮುನಿಸಿಪಾಲಿಟಿ, ಎಕ್ಸ್‌ಟೆಂಡೆಡ್ ಪ್ರದೇಶಗಳನ್ನು ಎಲ್ಲಾ ಗ್ರಾಮೀಣ ಪ್ರದೇಶಗಳನ್ನು ಸೇರಿಸಿಕೊಂಡು ಮುನಿಸಿಪಾಲಿಟಿ ಆಗಿದೆ. ಜನಸಂಖ್ಯೆ ಈಗ 48ಸಾವಿರ ಆಗಿದೆ. ಇವತ್ತು ಆ ಗ್ರಾಮೀಣ ಪ್ರದೇಶಗಳು ಗ್ರಾಮೀಣ ಪ್ರದೇಶವಾಗಿಯೇ, ಉಳಿದಿವೆ. ಇದರಿಂದ ಈ ಸಾರಿ ಭಾರೀ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ಕಡೆಗಳಲ್ಲಿ ಎಕ್ಸ್‌ಟೆಂಡೆಡ್ ಏರಿಯಾ ಪರಿರ್ವತನೆ ಪಟ್ಟಣ ಪಂಚಾಯಿತಿ ಇರಬಹುದು, ನಗರ ಪಂಚಾಯಿತಿ ಇರಬಹುದು ಆ ಭಾಗದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ತಾವು ಇದನ್ನು ಪರಿಶೀಲನೆ ಮಾಡುತ್ತೇನೆಂದು ಕೊಟ್ಟ ಭರವಸೆಗೆ ನಾನು ಖಂಡಿತಾ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ವಿಷಯ: (ಆ) ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ 2001-02ನೇ ಸಾಲಿನಲ್ಲಿ ಕುಟುಂಬ ಕಲ್ಯಾಣ ಫಲಾನುಭವಿಗಳಿಗೆ ಪರಿಹಾರಧನ ನೀಡದೆ ಔಷಧಿ ಖರೀದಿಸುವಲ್ಲಿ ಹಣದುರುಪಯೋಗ.

ಶ್ರೀ ಗುಂಡಪ್ಪ ವಕೀಲ್: (ಜಾರಾನ್) ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ 2001-02ನೇ ಸಾಲಿನಲ್ಲಿ ಕುಟುಂಬ ಕಲ್ಯಾಣ ಫಲಾನುಭವಿಗಳಿಗೆ ಪರಿಹಾರ ಧನವನ್ನು ನೀಡದೇ ಔಷಧಿ ಖರೀದಿಸುವಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಯೋಜನಾ ನಿರ್ದೇಶಕರು (ಆರ್‌ಸಿಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಈ ಪ್ರಕರಣದಲ್ಲಿ ಪ್ರಾಥಮಿಕ ತನಿಖೆಯನ್ನು ನಡೆಯಿಸಿ, ವರದಿ ನೀಡಿದ್ದು, ಈ ವಿಷಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬೀದರ್ ಇವರು 2001-02ನೇ ಸಾಲಿನ ಮಾರ್ಚ್ ತಿಂಗಳ ಕೊನೆಯ ದಿನಗಳಲ್ಲಿ M/s. Karnataka State Industrial Supplies & Marketing Federation, Bangalore ಇವರಿಗೆ 18 ಸರಬರಾಜು ಆದೇಶವನ್ನು ನೀಡಿರುತ್ತಾರೆ. ಈ ಸರಬರಾಜು ಆದೇಶದಲ್ಲಿ Amcrylate a Bio Adhesive ಔಷಧಿಗಳಿಗೆ ಒಟ್ಟು ಮೊತ್ತ ರೂ.17,30,140-(ತೆರಿಗೆ ಹೊರತುಪಡಿಸಿ) ಆದೇಶವನ್ನು ನೀಡಿರುತ್ತಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳು ಒಟ್ಟು 18 ಆದೇಶಗಳನ್ನು ಹೊರಡಿಸಿದ್ದು, ಅವುಗಳಲ್ಲಿ 17 ಆದೇಶದಲ್ಲಿ ಮೊಬಲಗು ರೂ.96,425-00 ಎಂದು ನಮೂದಿಸಲಾಗಿದ್ದು, ಒಂದು ಆದೇಶದಲ್ಲಿ ರೂ.90,915-00 ಎಂದು ನಮೂದಿಸಲಾಗಿದೆ. ಇದು ರಾಜ್ಯ ಸರ್ಕಾರ ಪಾರದರ್ಶಕತೆಯ ಅಧಿನಿಯಮ 2002 ರಿಂದ ತಪ್ಪಿಸಿಕೊಳ್ಳಲು ಪ್ರತಿ ಆದೇಶವನ್ನು ರೂ.1 ಲಕ್ಷಕ್ಕಿಂತ ಕಡಿಮೆ ದರದಲ್ಲಿ ಅದರಲ್ಲೂ ಒಂದೇ ಸಂಸ್ಥೆಗೆ ಒಂದೇ ಪದಾರ್ಥಕ್ಕಾಗಿ ನೀಡಲಾಗಿದ್ದು ಕಂಡು ಬಂದಿದೆ. ಬೀದರ್ ಜಿಲ್ಲೆಯಿಂದ